**ಅಸಲು ದಾವ ಸಂಖ್ಯೆ:1135/2017**
**ಪಿ.ಡಬ್ಲೂ -1**

**ದಿಃ 06-02-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಆರ್ ಸಿ ಐ ರವರಿಂದಃ-**

1. ನಾನು ಹಾಜರುಪಡಿಸಿರುವ ನಿಪಿ-24 ತೀರ್ಪಿನಲ್ಲಿ ಸದರಿ ದಾವೆಯ ಪ್ರತಿವಾದಿ ದಾವಾ ಸ್ವತ್ತಿನ ಮಾಲೀಕರೆಂದು ಎಲ್ಲಿಯೂ ಸಹ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-24 ಕ್ಕೆ ಸಂಬಂಧಪಟ್ಟ ದಾವೆಯು ಅಸಲು ದಾವಾ ಸಂಖ್ಯೆ 1549/2011 ದಾವೆಯಲ್ಲಿ ಸರ್ವೆ ನಂಬರ 191/ಬಿ ರ ಪ್ಲಾಟ ಸಂಖ್ಯೆ 57/1 ಗೆ ಸಂಬಂಧಪಟ್ಟಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೇ ನಂಬರ 191/ಬಿ ರ ಪ್ಲಾಟ ನಂಬರ 58/1 ಮತ್ತು 59/1 ಸಹ ದಾವಾ ಸ್ವತ್ತುಗಳಾಗಿದ್ದವು ಎಂದರೆ ಸರಿ. ಸದರಿ ದಾವೆಯ ತೀರ್ಪಿನ ಪ್ರಕಾರ ಸಮರ್ಥ ಶ್ರೀಧರ ತತ್ವಜ್ಞಾನ ಮಂಡಳ ಆ ದಾವೆಯ ದಾವಾ ಸ್ವತ್ತಿನ ಮಾಲೀಕರು ಎಂದು ತೀರ್ಪು ಆಗಿರುತ್ತದೆ ಎಂದರೆ ಸರಿ. ಆ ದಾವೆಯಲ್ಲಿ ನನ್ನನ್ನು ಸಹ ಪಕ್ಷಗಾರನಾಗಿ ಮಾಡಬೇಕು ಎಂದು ನಾನು ಅರ್ಜಿ ಸಲ್ಲಿಸಿದ್ದೆ. ನಿಪಿ-12 ರ ಕ್ರಯ ಪತ್ರವು ಸರ್ವೆ ನಂಬರ 191/1 ರಲ್ಲಿನ 4 ಗುಂಟೆ ಜಮಿನಿಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರನನ್ನಾಗಿ ಮಾಡಬೇಕು ಎಂದು ನಾನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿತು. ಸದರಿ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ.

2. ನಿಪಿ-28 ಉತಾರದಲ್ಲಿ ತೋರಿಸಿರುವ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಲಾಗಿದೆ. ನಿಪಿ-28 ರಿಂದ ನಿಪಿ-30 ರಲ್ಲಿ ತೋರಿಸಿರುವ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ ಎಂದರೆ ಸರಿಯಲ್ಲ. ನಿಪಿ-31 ರಲ್ಲಿ ತೋರಿಸಿರುವ ನೀಲಿ ನಕ್ಷೆಯಂತೆ ದಾವಾ ಸ್ವತ್ತಿನಲ್ಲಿ ಈವರೆಗೂ

ಯಾವುದೇ  ಮನೆ ಇರುವುದಿಲ್ಲ, ಅಲ್ಲಿ ಶೆಡ್ ಇರುತ್ತದೆ. ನಿಪಿ-32 ಮತ್ತು 33 ರ ರಶೀದಿಗಳಲ್ಲಿ ದಾವಾ ಸ್ವತ್ತಿನ ಸಂಖ್ಯೆ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-34 ರಿಂದ ನಿಪಿ-38 ರ ಛಾಯಾ ಚಿತ್ರಗಳಿಗೆ ಸಂಬಂಧಿಸಿದಂತೆ ನಾನು ಸಿ.ಡಿ ಹಾಜರುಪಡಿಸಿರುವುದಿಲ್ಲ. ಏಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಇನ್ನು ಮುಂದೆ ಬೇಕಾದಲ್ಲಿ ಹಾಜರುಪಡಿಸುವುದಾಗಿ ನುಡಿಯುತ್ತಾರೆ. ನಾನು ಖೊಟ್ಟಿ ದಾಖಲೆಗಳನ್ನು ಹಾಜರುಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**